**ಚಾಸಾ-1 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ. 15704/2020**

| | |
|---|---|
| **ಸಾಕ್ಷಿದಾರರ ಹೆಸರು** | ಯಲ್ಲಪ್ಪ. |
| **ತಂದೆಯ ಹೆಸರು** | ಕಾವೇರಪ್ಪ. |
| **ವಯಸ್ಸು** | 56 ವರ್ಷ |
| **ಉದ್ಯೋಗ** | ರಿಯಲ್ ಎಸ್ಟೇಟ್, |
| **ವಾಸ** | ಗೊಟ್ಟಿಗೆರೆ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 24.09.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಚಾಸಾ-2 ಮತ್ತು 3 ರವರು ನನಗೆ ಗೊತ್ತು. ಜೂನ್ 2016 ರಲ್ಲಿ ಆರೋಪಿ ಶ್ರೀನಿವಾಸ್ ರವರು ನಮ್ಮಮನೆಗೆ ಬಂದಿರುತ್ತಾರೆ. ಆರೋಪಿಯು ಬಟ್ಟೆ ಅಂಗಡಿ ವ್ಯಾಪಾರ ಮಾಡುತ್ತಿದ್ದರು. ಆತನು ನನ್ನ ಸ್ನೇಹಿತನು. ಆಗ ನೀವು ರೂ.10 ಲಕ್ಷ ಹಣವನ್ನು ಕೊಡಿ ವ್ಯವಹಾರವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತೇನೆ ಎಂದು ಆರೋಪಿ ಕೇಳಿರುತ್ತಾರೆ. ಆರೋಪಿಯು ಆರು ತಿಂಗಳ ಕಾಲವಕಾಶ ಕೇಳಿದ್ದು ಶೇ.2 ರಷ್ಟು ಬಡ್ಡಿ ಕೊಡುವುದಾಗಿ ಒಪ್ಪಿಕೊಂಡಿರುತ್ತಾನೆ. ನಂತರ ಎರಡು ಮೂರು ದಿನಗಳ ನಂತರ ಬಾ ನಾನು ಹಣವನ್ನು ಕೊಡುತ್ತೇನೆ ಎಂದು ಆರೋಪಿಗೆ ಹೇಳಿದ್ದೆ. ದಿ .12.06.2016 ರಂದು ಆರೋಪಿಯು ಪುನಃ ನಮ್ಮ ಮನೆಗೆ ಬಂದಿರುತ್ತಾನೆ. ಆಗ ಆರೋಪಿಗೆ ರೂ.10ಲಕ್ಷ ನಗದು ಹಣವನ್ನು ಕೊಟ್ಟಿರುತ್ತೇನೆ. ಆರೋಪಿಯು ಆರು ತಿಂಗಳಾದರೂ ಸಹ ನನಗೆ ಹಣವನ್ನಾಗಲೀ ಅಥವಾ ಬಡ್ಡಿಯನ್ನಾಗಲೀ ಕೊಡಲಿಲ್ಲ. ದಿ.23.04.2017 ರಂದು ಆರೋಪಿಯು ಒಂದು ಚೆಕ್ಕಿಗೆ ದಿನಾಂಕವನ್ನು ನಮೂದು ಮಾಡಿ ರೂ.12ಲಕ್ಷಗಳಿಗೆ ನೀಡಿರುತ್ತಾರೆ.

**ಈ ಹಂತದಲ್ಲಿ ಮೂಲ ದಾಖಲಾತಿಗಳು ಇಲ್ಲದೇ ಇರುವುದರಿಂದ ಹಿ.ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿರುತ್ತಾರೆ. ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**